ಓ.ಎಸ್. ನಂ.32/2023
ಸಿಡಬ್ಲು-1

ದಿನಾಂಕ 25.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ

ನಿಪಿ-4 ರಲ್ಲಿ ನೀಡಿದ ಗುಲಾಬಿ ಬಣ್ಣದ ಪ್ರದೇಶದಲ್ಲಿರುವ ರಸ್ತೆಯ ಸಮೇತ ಹಿಡಿದು ಅಳತೆ ಮಾಡಿರುತ್ತೀರಿ ಎಂದರೆ ಸಾಕ್ಷಿ ರಸ್ತೆ ಬಿಟ್ಟು ಅಳತೆ ಮಾಡಿರುತ್ತೇನೆ ಎಂದು ಹೇಳುತ್ತಾರೆ. ದಾವಾಸ್ತಿಯಲ್ಲಿರುವ ಶಾಲೆಯ ಜಾಗವನ್ನು ಯಾವ ರೀತಿ ಅಳತೆ ಮಾಡಿದ್ದೀರಾ ಎಂದರೆ ಸಾಕ್ಷಿ ರಸ್ತೆ ಬಿಟ್ಟು ದಕ್ಷಿಣದಿಂದ ಉತ್ತರ ದಿಕ್ಕಿನ ಶಾಲೆಯ ಕಂಪೌಡವರೆಗೆ ಅಳತೆ ಮಾಡಿರುತ್ತೇನೆ ಎಂದು ಹೇಳುತ್ತಾರೆ ಮತ್ತು ಪೂರ್ವ-ಪಶ್ಚಿಮಕ್ಕೆ ಶಾಲೆಯ ಕಂಪೌಂಡ ಅಳತೆ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಈ ಕುರಿತು ನನ್ನ ವರದಿಯಲ್ಲಿ ನಮೂದಿಸಿಲ್ಲ ಆದರೆ ಸ್ಕೆಚ್ ನಕಾಶೆಯಲ್ಲಿ ನಮೂದಿಸಿರುತ್ತೇನೆ. ಪಿಟಿ ಶೀಟ್, ಆಕಾರಬಂದ ಮತ್ತು ಸ್ಕೆಚ್ ನಕಾಶೆಗಳ ಪ್ರಕಾರ ಅಳತೆ ಮಾಡಿರುತ್ತೇನೆ. ನಾನು ಸರ್ವೆ ನಂ.106 ನ್ನು ಸಂಪೂರ್ಣವಾಗಿ ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಶಾಲೆಯವರು 01-ಎಕರೆ 04-ಗುಂಟೆ ಜಮೀನಿನಲ್ಲಿ ಕಬ್ಜೆಯಿದ್ದು ನಾನು ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ